ದಿನಾಂಕಃ 23-01-2026 ರಂದು ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು.

**ಪಾಟೀಸವಾಲುಃ- ವಾದಿ ಪರ ಶ್ರೀ. ಎನ್ ಆರ್ ಬಿ ವಕೀಲರಿಂದ.**

ವಾದಿಯರು ನಮ್ಮ ವಿರುದ್ಧ ಏನು ಪರಿಹಾರ ಬೇಡಿ ದಾವೆ ಸಲ್ಲಿರುತ್ತಾರೆ ಎಂದು ಗೊತ್ತಿಲ್ಲ. ದಾವಾ ಆಸ್ತಿ ಸರ್ವೇ ನಂ.164 ಕ್ಷೇತ್ರ 05 ಎಕರೆ 17 ಗುಂಟೆ ಜಮೀನಿನಲ್ಲಿ ನಾನು ಯಾವುದೇ ಖರೀದಿ ವ್ಯವಹಾರ ಮಾಡಿಕೊಂಡಿಲ್ಲ ಎಂದರೆ ಸರಿಯಲ್ಲ. ಸಾಕ್ಷಿ ಸದರಿ ಕ್ಷೇತ್ರದಲ್ಲಿ 03 ಎಕರೆ 13 ಗುಂಟೆ ಜಮೀನು ಖರೀದಿ ಪಡೆದುಕೊಂಡಿರುವುದಾಗಿ ನುಡಿಯುತ್ತಾರೆ. ನಾವು ಖರೀದಿ ಪಡೆದುಕೊಂಡಿರುವುದಾಗಿ ಹೇಳಿದ್ದು ಖರೀದಿ ಪತ್ರದಲ್ಲಿ ಸರ್ವೇ ನಂಬರ 164 ರ ಉಲ್ಲೇಖ ಮಾಡಿರುತ್ತಾರೆಯೋ ಇಲ್ಲವೋ ನನಗೆ ಗೊತ್ತಿಲ್ಲ. ನಾನು ಸರ್ವೇ ನಂ.164 ರ ಜಮೀನಿನ ಕುರಿತು ಖರೀದಿ ಬರೆಸಿಕೊಂಡಿಲ್ಲ ಎಂದರೆ ಸರಿಯಲ್ಲ. ಆದ್ದರಿಂದ ನಮ್ಮ ಖರೀದಿ ಪತ್ರದಲ್ಲಿ ಸದರಿ ಸರ್ವೇ ನಂಬರ ಉಲ್ಲೇಖ ಮಾಡಿಲ್ಲ ಎಂದರೆ ಸರಿಯಲ್ಲ. ಖರೀದಿ ಪಡೆದುಕೊಳ್ಳುವ ಪೂರ್ವದಲ್ಲಿ ನಮ್ಮ ತಂದೆಯವರು ಸರ್ವೇ ನಂ.164 ರ ಕಾಗದ ಪತ್ರಗಳನ್ನು ತಿಳಿದುಕೊಳ್ಳುವ ಪ್ರಯತ್ನ ಮಾಡಿರುತ್ತಾರೆಯೇ ಎಂಬ ಪ್ರಶ್ನೆಗೆ ಸಾಕ್ಷಿ ಅದು ನಮ್ಮ ತಂದೆಯವರಿಗೆ ಗೊತ್ತು ಎಂದು ನುಡಿಯುತ್ತಾರೆ. ಸರ್ವೇ ನಂ.164 ರ ಪಹಣಿಗೆ ಕುಲಕರ್ಣಿ ಮನೆನತದವರ ಹೆಸರು ಯಾವಾಗ ದಾಖಲು ಆಗಿರುತ್ತದೆ ಎಂದು ನನಗೆ ಗೊತ್ತಿಲ್ಲ. ಸದರಿ ಜಮೀನು ಕುಲಕರ್ಣಿ ಮನೆತನದ ಜಮೀನು ಎಂದರೆ ಸರಿ. 1 ನೇ ಪ್ರತಿವಾದಿಯ ಗಂಡ ವಿನಾಯಕರಾವ್ ಇವರಿಗೆ ದತ್ತಾತ್ರೇಯ ಮತ್ತು ಗುರುರಾವ್ ಕುಲಕರ್ಣಿಯವರು ಚಿಕ್ಕಪ್ಪರಾಗಬೇಕು ಎಂದರೆ ಸರಿ. ದತ್ತಾತ್ರೇಯ ಮತ್ತು ಗುರುರಾವ್ ಕುಲಕರ್ಣಿಯವರ ಮನೆಗಳು ಹುರುಳಿಕುಪ್ಪಿ ಗ್ರಾಮದಲ್ಲಿ ಬೇರೆ ಬೇರೆ ಇರುತ್ತವೆ ಎಂದರೆ ಸರಿ. 1 ನೇ ಪ್ರತಿವಾದಿಯ ಗಂಡ ವಿನಾಯಕರಾವ್, ದತ್ತಾತ್ರೇಯ ಮತ್ತು ಗುರುರಾವ್ ಕುಲಕರ್ಣಿ ಇವರ ಮಧ್ಯೆ ಪಾಲು ವಿಭಾಗ ಆಗಿ ವಿನಾಯಕರಾವ್ ಇವರಿಗೆ 03 ಎಕರೆ 13 ಗುಂಟೆ ಪಾಲು ಬಂದಿರುತ್ತದೆ ಎಂದರೆ ಸರಿ. ಗುರುರಾವ್ ಹಾಗೂ ದತ್ತಾತ್ರೇಯ ಇವರಿಗೆ ಪ್ರತಿಯೊಬ್ಬರಿಗೂ 01 ಎಕರೆ

ಪಾಲು ಬಂದಿರುತ್ತದೆ ಎಂದರೆ ಸರಿ. ಹಾಗೇ ಪಾಲಿನ ಪ್ರಕಾರ ಅವರೆಲ್ಲರೂ ಸದರಿ ಜಮೀನುಗಳನ್ನು ಪ್ರತ್ಯೇಕವಾಗಿ ಸಾಗುವಳಿ ಮಾಡುತ್ತಾ ಬಂದಿರುತ್ತಾರೆ ಎಂದರೆ ಸರಿ.

2. ನಾವು 2010 ರಲ್ಲಿ ಜಮೀನು ಖರೀದಿ ಹಿಡಿದಿರುತ್ತೇವೆ. ಖರೀದಿ ವ್ಯವಹಾರವು ಹುರುಳಿಕುಪ್ಪಿ ಗ್ರಾಮದಲ್ಲಿ ಆಗಿರುತ್ತದೆ. ಖರೀದಿ ಹಿಡಿದ ದಿನಾಂಕ ಮತ್ತು ತಿಂಗಳು ಗೊತ್ತಿಲ್ಲ. 2010 ರಲ್ಲಿ ನನ್ನ ವಯಸ್ಸು 35 ಆಗಿತ್ತು. ಮೃತ ವಿನಾಯಕರಾವ್ ಇವರಿಗೆ ಹೆಂಡತಿ ಮತ್ತು ಮಕ್ಕಳು ಇರುವುದಾಗಿ ನನಗೆ ವಿಶೇಷವಾದ ಜ್ಞಾನ ಇತ್ತು ಎಂದರೆ ಸರಿಯಲ್ಲ. ಸಾಕ್ಷಿ ತಮ್ಮ ತಂದೆಗೆ ಇತ್ತು ಎಂದು ನುಡಿಯುತ್ತಾರೆ. ವಾದಿ ನಂ.2 ಮತ್ತು 3, ಪ್ರತಿವಾದಿ ನಂ.1 ಇವರು 2010 ರಲ್ಲಿ ವಯಸ್ಕರು ಇದ್ದರು ಎಂದರೆ ಸರಿಯಲ್ಲ. ಹಾಗೇ ವಯಸ್ಕರು ಇದ್ದರೂ ಸಹ ಅವರು ಅಪ್ರಾಪ್ತ ಇದ್ದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ಖರೀದಿ ಪತ್ರಕ್ಕೆ ವಾದಿಯರು ಮತ್ತು ಪ್ರತಿವಾದಿ ನಂ.1 ಇವರದು ಸಹಿ ಇರುವುದಿಲ್ಲ. ಖರೀದಿ ಪತ್ರಕ್ಕೆ ವಾದಿಯರು ಮತ್ತು 1 ನೇ ಪ್ರತಿವಾದಿಯ ಸಹಿ ಪಡೆದುಕೊಳ್ಳಲು ಏನಾದರು ತೊಂದರೆ ಇತ್ತಾ ಎಂದರೆ ಸಾಕ್ಷಿ ಅದು ನಮ್ಮ ತಂದೆಗೆ ಗೊತ್ತಿರುತ್ತದೆ ಎಂದು ನುಡಿಯುತ್ತಾರೆ. 3 ನೇ ವಾದಿ 15 ವರ್ಷಗಳಿಂದ ನೌಕರಿ ಮಾಡುತ್ತಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಅವರು ರಿಲಾಯನ್ಸ ಕಂಪನಿಯಿಂದ ಪ್ರತಿ ತಿಂಗಳು ರೂ.40 ಸಾವಿರ ಸಂಬಳ 2008 ರಿಂದಲೇ ಪಡೆಯುತ್ತಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. 2010 ರಲ್ಲಿ ವಾದಿಯರ ಕುಟುಂಬ ಆರ್ಥಿಕವಾಗಿ ಬಲಿಷ್ಠ ಇತ್ತು ಎಂದರೆ ಸರಿಯಲ್ಲ.

3. ಖರೀದಿ ವ್ಯವಹಾರದ ಮಾತುಕತೆ ಯಾವ ದಿನಾಂಕದಂದು, ಎಲ್ಲಿ ಆಗಿರತ್ತದೆ ಎಂದು ಗೊತ್ತಿಲ್ಲ. ಖರೀದಿ ವ್ಯವಹಾರ ಮಾತುಕತೆ ಆಗುವಾಗ ಗಂಗಪ್ಪ ಕಲಕೋಟಿ, ಗಣೇಶ ಕುಲಕರ್ಣಿ ಹಾಗೂ ವಿನಾಯಕರಾವ್, ಗುರುರಾವ್, ದತ್ತಾತ್ರೇಯ ಕುಲಕರ್ಣಿ ಇವರು ಇದ್ದರು. ಹಾಗೇ ಖರೀದಿ ವ್ಯವಹಾರದ ಮಾತುಕತೆ ಆಗುವಾಗ ನಾನು ಇರಲಿಲ್ಲ. ಖರೀದಿ ವ್ಯವಹಾರದ ಮಾತುಕತೆ ರೂ.3,25,000/- ಗಳಿಗೆ ಆಗಿರುತ್ತದೆ. ವಿನಾಯಕರಾವ್

ಕುಲಕರ್ಣಿ ಇವರಿಗೆ ನಗದು ರೂಪದಲ್ಲಿ ಹಣ ನೀಡಲಾಗಿರುತ್ತದೆಯೋ ಇಲ್ಲವೇ ಚೆಕ್ಕ ಮೂಲಕ ನೀಡಲಾಗಿರುತ್ತದೆಯೋ ಎಂದು ನನಗೆ ಗೊತ್ತಿಲ್ಲ. ನಾನು ಆ ಖರೀದಿ ವ್ಯವಹಾರವನ್ನು ಮೋಸದಿಂದ ಮಾಡಿಕೊಂಡಿರುತ್ತೇವೆ ಎಂದರೆ ಸರಿಯಲ್ಲ. ವಾದಿಯರ ಕುಟುಂಬಕ್ಕೆ ಯಾವುದೇ ಹಣದ ಅಡಚಣೆ ಇಲ್ಲದೇ ಇದ್ದರೂ ಸಹ ಇರುವುದಾಗಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸರ್ವೇ ನಂ.164 ರಲ್ಲಿಯ 03 ಎಕರೆ 13 ಗುಂಟೆ ಜಮೀನು ಈಗಲೂ ಸಹ ವಾದಿಯರ ಹೆಸರಿನಲ್ಲಿ ಇರುತ್ತದೆ ಎಂದರೆ ಸರಿಯಲ್ಲ. ಹಾಗೇ ನಮ್ಮ ತಂದೆಯವರ ಹೆಸರು ಇರುವ ಬಗ್ಗೆ ಪಹಣಿ ಹಾಜರುಪಡಿಸಿಲ್ಲ. ಹಾಗೇ ಒಂದು ವೇಳೆ ಖರೀದಿಯಾಗಿದ್ದಲ್ಲಿ ಮೂಲ ಮಾಲೀಕರ ಹೆಸರು ಕಡಿಮೆಯಾಗಿ ನಮ್ಮ ತಂದೆಯವರ ಹೆಸರು ದಾಖಲು ಆಗುತ್ತಿತ್ತು ಎಂದರೆ ಸರಿ. ನಾನು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಆಸ್ತಿಗಳಲ್ಲಿ ವಾದಿಯರದು ಮತ್ತು 1 ನೇ ಪ್ರತಿವಾದಿಯದು ಪಾಲು ಇರುತ್ತದೆ ಎಂದರೆ ಸರಿಯಲ್ಲ.

ಮರುವಿಚಾರಣೆ : ಇಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು).

ಓ.ಹೆ.ಕೆ.ಸರಿ.ಇದೆ.

ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು
ಜೆ ಎಮ್ ಎಫ್ ಸಿ, ಶಿಗ್ಗಾಂವ.
(ಸ್ಥಳಃ ಸವಣೂರ).